
ಕರ್ನಾಟಕ ಸರ್ಕಾರ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,
2021-22
ಪರ್ಯಾಯ ಶೈಕ್ಷಣಿಕ ಯೋಜನೆ
ವಿಷಯ:-ಸಮಾಜ ವಿಜ್ಞಾನ
ತರಗತಿ:-7ನೇ ತರಗತಿ
ರಚನೆಗೆ ಸಹಕಾರ:- ತರೀಕೆರೆ ಶೈಕ್ಷಣಿಕ ವಲಯ
ಪರಿಕಲ್ಪನೆ ಮತ್ತು ಮಾರ್ಗದರ್ಶನ
ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ರಾಮನಹಳ್ಳಿ, ಚಿಕ್ಕಮಗಳೂರು
Design by:Sathyaprakash R M Art Teacher

# ಪರಿವಿಡಿ


| ಕ್ರ.ಸಂ. | ಅಧ್ಯಾಯಗಳ ಹೆಸರು | ಪುಟ ಸಂಖ್ಯೆ |
|---|---|---|
| 01. | ವಿಜಯನಗರದ ಅರಸು ಮನೆತನಗಳು | 3–5 |
| 02. | ಬಹಮನಿ ಸುಲ್ತಾನರು | 6–11 |
| 03. | ಭಕ್ತಿಪಂಥ ಹಾಗೂ ಸೂಫಿ ಪರಂಪರೆ–1 | 12–14 |
| 04. | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ–2 | 15–17 |
| 05. | ನಮ್ಮ ಸಂವಿಧಾನ | 18–21 |


DIET CHIKMAGALUR

**ವಿಷಯ:– ಸಮಾಜ ವಿಜ್ಞಾನ** **ಘಟಕ:– ವಿಜಯ ನಗರದ ಅರಸು ಮನೆತನಗಳು** **ತರಗತಿ:– ಏಳನೇ ತರಗತಿ**

## ಅಭ್ಯಾಸ ಹಾಳೆ–1–ಕಲಿಕಾಂಶ ಚಟುವಟಿಕೆ

**ಸೂಚನೆಗಳು:–**

- **ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.**
- **ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.**
- **ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.**

ವಿಜಯನಗರ ಸಾಮ್ರಾಜ್ಯವು ಸಂಗಮನ ಪುತ್ರರಾದ ಹರಿಹರ, ಬುಕ್ಕರಾಯ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪರಿಂದ ಸಾ.ಶ 1336ರಲ್ಲಿ ತುಂಗಭದ್ರಾ ನದಿಯ ದಕ್ಷಿಣ ದಡದ ಮೇಲೆ ಸ್ಥಾಪಿಸಲ್ಪಟ್ಟಿತು. ಬಳ್ಳಾರಿ ಜಿಲ್ಲೆಯ ಹಂಪೆಯು ಇವರ ರಾಜಧಾನಿಯಾಗಿತ್ತು. ವರಾಹವು ರಾಜಲಾಂಛನವಾಗಿತ್ತು. ಸಾ.ಶ.1336 ರಿಂದ 1646 ರ ವರೆಗೆ ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ವಂಶಗಳು ಆಳ್ವಿಕೆ ನಡೆಸಿದವು. ಅವುಗಳೆಂದರೆ,

| ಸಂಗಮ ವಂಶ | ಸಾಳುವ ವಂಶ | ತುಳುವ ವಂಶ | ಅರವೀಡು ವಂಶ |
|---|---|---|---|

**ಎರಡನೆಯ (ಪ್ರೌಢ) ದೇವರಾಯ (ಸಾ.ಶ1424–1446)**
ಸಂಗಮ ವಂಶದ ಪ್ರಸಿದ್ಧ ದೊರೆಯಾಗಿದ್ದ ಈತನ ಆಳ್ವಿಕೆಯು ವಿಜಯನಗರದಲ್ಲಿ ಮಹತ್ವದ ಕಾಲವಾಗಿದೆ. ಪ್ರೌಢದೇವರಾಯನು ರಾಜಧಾನಿಯಲ್ಲಿ ಜೈನ ಹಾಗೂ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದನು. ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮ ಪುನರುಜ್ಜೀವನ ಕಂಡಿತು. ಪರ್ಷಿಯಾ ದೇಶದ ರಾಯಭಾರಿ **ಅಬ್ದುಲ್‌ರಜಾಕ್**ನು ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರವನ್ನು ಸಂದರ್ಶಿಸಿ **"ವಿಜಯನಗರದಂತಹ ಸಂಪದ್ಭರಿತ ರಾಜಧಾನಿಯನ್ನು ನನ್ನ ಕಣ್ಣುಗಳು ಮೊದಲ ಬಾರಿ ನೋಡುತ್ತಿವೆ. ನಗರಕ್ಕೆ ಏಳು ಕೋಟೆಗಳ ಆವರಣವಿದೆ. ರಾಯನ ಸೇನೆ ಲಕ್ಷಾ ಸಂಖ್ಯೆಯಲ್ಲಿದೆ" ಎಂದು ವರ್ಣಿಸಿದ್ದಾನೆ.**

**ಕೃಷ್ಣದೇವರಾಯ (ಸಾ.ಶ 1509–1529)**
ಕೃಷ್ಣದೇವರಾಯನು ವಿಜಯನಗರ ಅರಸರಲ್ಲಿಯೇ ಅತ್ಯಂತ ಪ್ರಸಿದ್ಧ ದೊರೆ. ಈತನು ಹಲವು ಯುದ್ಧಗಳನ್ನು ಮಾಡಿ ರಾಜ್ಯ ವಿಸ್ತರಿಸಿದನು.

- ಉಮ್ಮತ್ತೂರಿನ ಪಾಳೆಯಗಾರ ಗಂಗರಾಜನಿಂದ ಶಿವನಸಮುದ್ರ ಕೋಟೆಯನ್ನು ಗೆದ್ದನು.
- ರಾಯಚೂರು ಕೋಟೆಯನ್ನು ವಶಪಡಿಸಿಕೊಂಡನು
- ಬಿಜಾಪುರದ ಸುಲ್ತಾನನಿಂದ ಗೋವೆಯನ್ನು ವಶಪಡಿಸಿಕೊಳ್ಳುವಲ್ಲಿ ಪೋರ್ಚುಗೀಸರಿಗೆ ಸಹಾಯ ಮಾಡಿದನು.
- ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡನು. ಕಳಿಂಗದ ದೊರೆ ಗಜಪತಿ ಪ್ರತಾಪ ರುದ್ರನನ್ನು ಸೋಲಿಸಿ ರಾಜಧಾನಿ ಕಟಕ್‌ಅನ್ನು ಗೆದ್ದನು.

**ರಕ್ಕಸ ತಂಗಡಿ ಕದನ** :– ಕೃಷ್ಣದೇವರಾಯನ ಅಳಿಯ ಅರವೀಡು ವಂಶದ ರಾಮರಾಯನ ನೇತೃತ್ವದ ವಿಜಯನಗರದ ಸೈನ್ಯಕ್ಕೂ ದಖ್ಖನ್ ಸುಲ್ತಾನರ ಒಕ್ಕೂಟ ಸೈನ್ಯಕ್ಕೂ ಕೃಷ್ಣಾ ನದಿಯ ದಂಡೆಯ ಮೇಲೆ ನಡೆದ ರಕ್ಕಸ ತಂಗಡಿ ಯುದ್ಧದಲ್ಲಿ ರಾಮರಾಯನು ಹತನಾದನು. ಗೆದ್ದ ಸುಲ್ತಾನರು ವಿಜಯನಗರವನ್ನು ಲೂಟಿ ಮಾಡಿದರು.

**ವಿಜಯನಗರ ಸಾಮ್ರಾಜ್ಯದ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ** :

| ಕನ್ನಡ ಸಾಹಿತ್ಯ | ಅಷ್ಟ ದಿಗ್ಗಜ ಕವಿಗಳಲ್ಲಿ ಪ್ರಮುಖರು | ಸಂಸ್ಕೃತ ಸಾಹಿತ್ಯ |
|---|---|---|
| ಕುಮಾರವ್ಯಾಸನ –ಗದುಗಿನ ಭಾರತ<br>ರತ್ನಾಕರವರ್ಣಿಯ – ಭರತೇಶ ವೈಭವ<br>ಚಾಮರಸನ – ಪ್ರಭುಲಿಂಗಲೀಲೆ<br>ಲಕ್ಕಣ್ಣದಂಡೇಶನು–ಶಿವತತ್ವ ಚಿಂತಾಮಣಿ | ಅಲ್ಲಸಾನಿ ಪೆದ್ದಣ್ಣ,<br>ನಂದಿ ತಿಮ್ಮಣ್ಣ,<br>ಶ್ರೀನಾಥ, ಸೂರಣ್ಣ,<br>ತೆನಾಲಿ ರಾಮಕೃಷ್ಣ | ವಿದ್ಯಾರಣ್ಯರು – ಶಂಕರವಿಜಯ<br>ಗಂಗಾದೇವಿಯು – ಮಧುರಾವಿಜಯಂ<br>ಕೃಷ್ಣದೇವರಾಯ – ಜಾಂಬವತಿಕಲ್ಯಾಣ<br>ಪ್ರೌಢದೇವರಾಯ – ಸುಧಾನಿಧಿ |

**ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಾಕ್ಷಿಗಳು**:– ಹಂಪೆಯ ವಿರೂಪಾಕ್ಷ ದೇವಾಲಯ, ಹಜಾರ ರಾಮಸ್ವಾಮಿ ದೇವಾಲಯ, ವಿಠ್ಠಲಸ್ವಾಮಿ ದೇವಾಲಯ, ಕೃಷ್ಣಸ್ವಾಮಿ ದೇವಾಲಯ, ಶೃಂಗೇರಿ ವಿದ್ಯಾಶಂಕರ ದೇವಾಲಯ, ಸಾಸಿವೆಕಾಳು ಗಣೇಶ, ಕಡಲೆಕಾಳು ಗಣೇಶ , ಉಗ್ರನರಸಿಂಹ, ಕಲ್ಲಿನರಥ, ಕಮಲ್ ಮಹಲ್ ಸಾಕ್ಷಿಯಾಗಿವೆ.

**ವಿಷಯ:– ಸಮಾಜ ವಿಜ್ಞಾನ ಘಟಕ:– ವಿಜಯನಗರ ಸಾಮ್ರಾಜ್ಯ ತರಗತಿ:– ಏಳನೇ ತರಗತಿ**

## ಅಭ್ಯಾಸ ಹಾಳೆ –2 ಅಭ್ಯಾಸ ಚಟುವಟಿಕೆ

**ಸೂಚನೆಗಳು:–**

- ❖ ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ❖ ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

❖ ಪಠ್ಯಪುಸ್ತಕದ ಸಹಾಯದಿಂದ ಚಿತ್ರಗಳನ್ನು ಗಮನಿಸಿ ಇವುಗಳ ಹೆಸರನ್ನು ಬರೆಯಿರಿ








________________

❖ ದಕ್ಷಿಣ ಭಾರತದ ಈ ಭೂಪಟದ ಸಹಾಯದಿಂದ ವಿಜಯನಗರ ಸಾಮ್ರಾಜ್ಯದ ಪ್ರಮುಖ ಸ್ಥಳಗಳನ್ನು ಪಟ್ಟಿಮಾಡು (ಪಠ್ಯಪುಸ್ತಕದ ಸಹಾಯ ಪಡೆಯುವುದು )




**ವಿಜಯನಗರ ಸಾಮ್ರಾಜ್ಯದ ಪ್ರಮುಖ ಸ್ಥಳಗಳು**

1) ..............................................

2) ................................................

3) .............................................

4) .............................................

5) .............................................

6) .............................................

❖ ವಿಜಯ ನಗರವನ್ನಾಳಿದ ನಾಲ್ಕು ರಾಜವಂಶಗಳಲ್ಲಿ ಪಟ್ಟಿಯಲ್ಲಿ ಬಿಟ್ಟು ಹೋದ ವಂಶಗಳ ಹೆಸರನ್ನು ಸೇರಿಸಿ.

| | | | |
|---|---|---|---|
| | ಸಾಳುವ ವಂಶ | | ಅರವೀಡು ವಂಶ |

❖ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜ ಕವಿಗಳಲ್ಲಿ ನಾಲ್ಕು ಕವಿಗಳ ಹೆಸರನ್ನು ತಿಳಿಸಿ.

1....................................... 2....................................... 3 ...................................... 4..........................................

❖ ವಿಜಯನಗರ ಸಾಮ್ರಾಜ್ಯವನ್ನಾಳಿದ ಪ್ರಸಿದ್ಧ ನಾಲ್ಕು ಅರಸರ ಹೆಸರನ್ನು ಪಟ್ಟಿಮಾಡಿ.

1....................................... 2....................................... 3 ...................................... 4..........................................

ವಿಷಯ:–ಸಮಾಜ ವಿಜ್ಞಾನ ಘಟಕ:–ವಿಜಯನಗರ ಸಾಮ್ರಾಜ್ಯ ತರಗತಿ:–ಏಳನೇ ತರಗತಿ

## ಅಭ್ಯಾಸ ಹಾಳೆ – 3 ಮೌಲ್ಯಮಾಪನ ಚಟುವಟಿಕೆ

**ಸೂಚನೆಗಳು:–**

- ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

1.ಭಾರತದ ಭೂಪಟದಲ್ಲಿ ಕೃಷ್ಣದೇವರಾಯನ ಕಾಲದ ವಿಜಯನಗರ ಸಾಮ್ರಾಜ್ಯದೊಂದಿಗೆ ರಾಜಧಾನಿಯನ್ನು ಗುರುತಿಸಿ



2. ಕೃಷ್ಣದೇವರಾಯನ ಕಾಲದ ಪ್ರಮುಖ ಸ್ಥಳಗಳನ್ನು ತಿಳಿಸಿ

1) ……………………………………

2) ……………………………………

3) ……………………………………

4) ……………………………………

5) ……………………………………

6) ……………………………………

3. ನೀಡಿರುವ ಕವಿಗಳ ಹೆಸರನ್ನು ಅವರು ರಚಿಸಿರುವ ಕೃತಿಗಳೊಂದಿಗೆ ಹೊಂದಿಸಿ ಬರೆಯಿರಿ

| | | |
|---|---|---|
| ಕುಮಾರ ವ್ಯಾಸನ | – | ಪ್ರಭುಲಿಂಗಲೀಲೆ |
| ರತ್ನಾಕರವರ್ಣಿಯ | – | ಜಾಂಬವತಿ ಕಲ್ಯಾಣ |
| ಚಾಮರಸನ | – | ಗದುಗಿನ ಭಾರತ |
| ಕೃಷ್ಣದೇವರಾಯ | – | ಭರತೇಶ ವೈಭವ |

4. ವಿಜಯನಗರ ಕಾಲದ ಪ್ರಮುಖ ವಾಸ್ತುಶಿಲ್ಪಗಳನ್ನು ತಿಳಿಸಿ.

1.______________________

2.______________________

3.______________________

4.______________________

5.______________________

5. ಕೃಷ್ಣದೇವರಾಯನ ಸೈನಿಕ ಸಾಧನೆಗಳನ್ನು ವಿವರಿಸಿ.

______________________________________________________________________

6. ರಕ್ಕಸ ತಂಗಡಿ ಕದನವವು ಯಾರು ಯಾರಿಗೆ ನಡೆಯಿತು ? ಅಂತಿಮವಾಗಿ ಯಾರಿಗೆ ಗೆಲುವಾಯಿತು ?

______________________________________________________________________

**ವಿಷಯ:-ಸಮಾಜ ವಿಜ್ಞಾನ** **ಘಟಕ:- ಬಹಮನಿ ಸುಲ್ತಾನರು** **ತರಗತಿ:- ಏಳನೇ ತರಗತಿ**

## ಅಭ್ಯಾಸ ಹಾಳೆ 1 -ಕಲಿಕಾಂಶ ಚಟುವಟಿಕೆ

**ಸೂಚನೆಗಳು :-**

- **ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.**
- **ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.**
- **ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.**

ಬಹಮನಿ ಸಾಮ್ರಾಜ್ಯವು 1347ರಲ್ಲಿ ಸ್ಥಾಪನೆಯಾಯಿತು. ಇದರ ಸ್ಥಾಪಕ 'ಅಲ್ಲಾವುದ್ದಿನ್ ಹಸನ್ ಗಂಗು ಬಹಮನ್ ಷಾ'. ಪ್ರಾರಂಭದಲ್ಲಿ ಕಲಬುರಗಿ ಅನಂತರ ಬೀದರ್ ಅವರ ರಾಜಧಾನಿಯಾಗಿತ್ತು. ತಾಜುದ್ದೀನ್ ಫಿರೋಜ್ ಷಾ ಬಹಮನಿ ವಂಶದಲ್ಲಿ ಪ್ರಸಿದ್ಧನಾದ ಸುಲ್ತಾನ. ಬಹಮನಿ ರಾಜ್ಯವನ್ನು ಉನ್ನತ ಮಟ್ಟಕ್ಕೆ ಕೊಂಡಯ್ದ ಕೀರ್ತಿ ಮಹಮದ್ ಗವಾನ್‌ನಿಗೆ ಸಲ್ಲುತ್ತದೆ. ಪರ್ಷಿಯನ್ ಮೂಲದವನಾದ ಗವಾನನು 3ನೇ ಮಹಮದ್ ಷಾ ಸುಲ್ತಾನನ ಮುಖ್ಯಮಂತ್ರಿಯಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದನು. ಮಹಮದ್ ಗವಾನ್ ಬೀದರ್‌ನಲ್ಲಿ ಮದರಸಾ (ಮಹಾವಿದ್ಯಾಲಯ) ಸ್ಥಾಪಿಸಿದನು. ಇವನ ಮರಣದ ನಂತರ ಬಹಮನಿ ರಾಜ್ಯ ಐದು ಷಾಹಿ ರಾಜ್ಯಗಳಾಗಿ ಒಡೆದು ಹೋಯಿತು.

### ಬಹಮನಿ ಸುಲ್ತಾನರ ಸಾಂಸ್ಕೃತಿಕ ಕೊಡುಗೆಗಳು

**ಶಿಕ್ಷಣ**

- ಬಹಮನಿ ಸುಲ್ತಾನರು ಇಸ್ಲಾಂ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು.
- ಶಾಲೆಗಳಲ್ಲಿ ಕುರಾನ್, ತರ್ಕಶಾಸ್ತ್ರ ಮತ್ತು ಸೂಫೀ ಪಂಥದ ತತ್ವಗಳನ್ನು ಬೋಧಿಸಲಾಗುತ್ತಿತ್ತು.

**ವಾಸ್ತುಶಿಲ್ಪ**

- ಕಲಬುರಗಿಯಜಾಮೀ ಮಸೀದಿ. ಬಂದೇ ನವಾಜರ ಸಮಾಧಿ.
- ಬೀದರ್‌ನ ಸೋಲಾಖಾಂಬ್ ಮಸೀದಿ.
- ಮಹಮದ್ ಗವಾನನು ಕಟ್ಟಿಸಿದ ಮದರಸ.

ಮುಖ್ಯವಾದವುಗಳಾಗಿವೆ.





**ಬಹಮನಿ ರಾಜ್ಯ ಐದು ಷಾಹಿ ಮನೆತನಗಳು**

- **ವಿಜಯಪುರದ ಆದಿಲ್ ಷಾಹಿ.**
- **ಬೀದರ್‌ನ ಬರೀದ್ ಷಾಹಿ**
- **ಗೋಲ್ಕಂಡದ ಕುತುಬ್ ಷಾಹಿ**
- **ಅಹಮದ್ ನಗರದ ನಿಜಾಂ ಷಾಹಿ**
- **ಬೀರಾರನ ಇಮಾದ್ ಷಾಹಿ**

**ಆದಿಲ್ ಷಾಹಿಗಳ ಸಾಹಿತ್ಯ ಕೊಡುಗೆಗಳು**

- **ಫೆರಿಸ್ತಾ** :- "ತಾರೀಖ್-ಇ-ಫೆರಿಸ್ತಾ" ಮತ್ತು "ಗುಲ್‌ಶನ್-ಎ-ಇಬ್ರಾಹಿಂ"
- **ಅಬ್ದುಲ್‌ನ**:-"ಇಬ್ರಾಹಿಂ ನಾಮಾ"
- **ಮುಲ್ಲಾ ನಸ್ರತಿ**:- "ಅಲಿನಾಮ"
- **ತೊರವೆಯ ನರಹರಿ** ಕವಿ"ತೊರವೆರಾಮಾಯಣ"

**ಕಲೆ ಮತ್ತು ವಾಸ್ತುಶಿಲ್ಪ : ವಾಸ್ತುಶಿಲ್ಪದ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಷಾಹಿಗಳ ನಿರ್ಮಾಣಗಳಿಗೆ ಮಹತ್ವದ ಸ್ಥಾನವಿದೆ.**

| | |
|---|---|
| **ಅರಮನೆಗಳು**<br>**ಗಗನ್ ಮಹಲ್**<br>ಸಾ.ಶ. 1620ರಲ್ಲಿ ಇಬ್ರಾಹಿಂ ಆದಿಲ್‌ಷಾ ಕಟ್ಟಿಸಿದನು. ಇದು 3 ಅಂತಸ್ತುಗಳ ಗೋಪುರವನ್ನು ಒಳಗೊಂಡಿದೆ<br> | **ಮೆಹತರ್ ಮಹಲ್ ಮತ್ತು ಅಸಾರ್ ಮಹಲ್**<br>ಇದುಕೂಡ 3 ಅಂತಸ್ತಿನ ಅರಮನೆಯಾಗಿದೆ. ಇದನ್ನು ಸಹ ಎರಡನೇ ಇಬ್ರಾಹಿಂ ಆದಿಲ್ ಷಾ ನಿರ್ಮಿಸಿದನು.<br> |
| **ಕೋಟೆಗಳು:** ವಿಜಯಪುರದ ಕೋಟೆ ಭಾರೀ ರಚನೆಯಾಗಿದ್ದು 96 ಕೊತ್ತಲ ಹಾಗೂ 6 ಮಹಾದ್ವಾರಗಳನ್ನು ಹೊಂದಿದೆ. | **ಮಸೀದಿಗಳು**<br>**ಜಾಮೀ ಮಸೀದಿ:**<br>ಇದನ್ನು ಅಲಿ ಆದಿಲ್ ಷಾನು ನಿರ್ಮಾಣ ಮಾಡಿದನು. ಇದು ಭವ್ಯವಾದ ಪ್ರಾರ್ಥನಾ ಭವನಕ್ಕೆ ಹೆಸರುವಾಸಿಯಾಗಿದೆ<br> |
| **ವಿಜಯಪುರದಲ್ಲಿ ಗೋಲ ಗುಮ್ಮಟ** ಎಂಬ ಸಮಾಧಿಯನ್ನು ಸಾ.ಶ. 1656ರಲ್ಲಿ ನಿರ್ಮಿಸಿದನು. ಇದರಕೇಂದ್ರದಲ್ಲಿ ವಿಶಾಲವಾದ ಗುಮ್ಮಟವಿದೆ. ಗುಮ್ಮಟದ ಒಳಭಾಗದಲ್ಲಿ **'ಪಿಸುಗುಟ್ಟುವ' ಮೊಗಸಾಲೆ** ಇದೆ. ಗೋಲಗುಮ್ಮಟವ ಜಗತ್ತಿನ ಎರಡನೆಯ ದೊಡ್ಡ ಗುಮ್ಮಟವಾದರೆ, ಭಾರತದ ಅತಿ ದೊಡ್ಡ ಗುಮ್ಮಟವಾಗಿದೆ. |  |

**ವಿಷಯ:–ಸಮಾಜ ವಿಜ್ಞಾನ** **ಘಟಕ :– ಬಹಮನಿ ಸುಲ್ತಾನರು** **ತರಗತಿ:– ಏಳನೇ ತರಗತಿ**

## ಅಭ್ಯಾಸ ಹಾಳೆ 2-ಅಭ್ಯಾಸ ಚಟುವಟಿಕೆ


**ಸೂಚನೆಗಳು :–**

- ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

**1. ಷಾಹಿ ಮನೆತನಗಳನ್ನು ಅವರ ರಾಜಧಾನಿಯೊಂದಿಗೆ ಹೊಂದಿಸಿ ಬರೆಯಿರಿ.**

| ಅ | ಆ |
| --- | --- |
| ❖ ವಿಜಯಪುರ | ನಿಜಾಂ ಷಾಹಿ |
| ❖ ಬೀದರ್ | ಬರೀದ್ ಷಾಹಿ |
| ❖ ಗೋಲ್ಕಂಡ | ಇಮಾದ್ ಷಾಹಿ |
| ❖ ಅಹಮದ್ ನಗರದ | ಆದಿಲ್ ಷಾಹಿ. |
| ❖ ಬೀರಾರ್ | ಕುತುಬ್ ಷಾಹಿ |

**2. ಈ ಕೆಳಗಿನ ಸ್ಮಾರಕಗಳನ್ನು ಹೆಸರಿಸಿ.**


______________________


______________________



______________________


______________________

**3. ಆದಿಲ್ ಷಾಹಿಗಳ ಕಾಲದಲ್ಲಿ ರಚಿತವಾದ ಕವಿಗಳ ಸಾಹಿತ್ಯದ ಹೆಸರನ್ನು ಬರೆಯಿರಿ.**

- ಫೆರಿಸ್ತಾ :–______________________
- ಅಬ್ದುಲ್ :–______________________
- ಮುಲ್ಲಾ ನಸ್ರತಿ :–______________________
- ತೊರವೆಯ ನರಹರಿ :–______________________

**4. ದಕ್ಷಿಣ ಭಾರತದ ಈ ಭೂಪಟದ ಸಹಾಯದಿಂದ ಬಹಮನಿ ಸಾಮ್ರಾಜ್ಯದ ಪ್ರಮುಖ ಸ್ಥಳಗಳನ್ನು ಪಟ್ಟಿಮಾಡು (ಪಠ್ಯಪುಸ್ತಕದ ಸಹಾಯ ಪಡೆಯುವುದು)**




ವಿಷಯ :– ಸಮಾಜ ವಿಜ್ಞಾನ ಘಟಕ :– ಬಹಮನಿ ಸುಲ್ತಾನರು ತರಗತಿ:–ಏಳನೇ ತರಗತಿ


## ಅಭ್ಯಾಸ ಹಾಳೆ 3-ಮೌಲ್ಯಮಾಪನ ಚಟುವಟಿಕೆ

**ಸೂಚನೆಗಳು**

- ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

**1. ಈ ಕೆಳಗಿನ ಸ್ಮಾರಕಗಳನ್ನು ಹೆಸರಿಸಿ.**






__________ __________ __________ __________

**2. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ**

1. ಬಹಮನಿ ಸಾಮ್ರಾಜ್ಯವನ್ನು __________ ನು ಸ್ಥಾಪಿಸಿದನು.
2. ಕಲಬುರಗಿ__________ ಸುಲ್ತಾನರ ರಾಜಧಾನಿಯಾಗಿತ್ತು.
3. ಫಿರೋಜ್ ಷಾ ಸುಲ್ತಾನನು ಭೀಮಾ ನದಿಯ ದಂಡೆಯ ಮೇಲೆ ________ ನಗರವನ್ನು ನಿರ್ಮಿಸಿದನು.
4. ಮಹಮದ್ ಗವಾನನು__________ ಸ್ಥಳದಲ್ಲಿ ಮದರಸವನ್ನು ಕಟ್ಟಿಸಿದನು.

**3. ಮಹಮದ್ ಗವಾನನ ಸಾಧನೆಗಳನ್ನು ತಿಳಿಸಿ**

________________________________________

________________________________________

**4. ಐದು ಷಾಹಿ ಮನೆತನಗಳನ್ನು ಹೆಸರಿಸಿ**

1.__________ 2.__________ 3.__________

4.__________ 5.__________

**5. ಮಹಮದ್ ಗವಾನ್‌ನ ಸಾಧನೆಗಳನ್ನು ಕುರಿತು ಬರೆಯಿರಿ.**

________________________________________

________________________________________

________________________________________

________________________________________

________________________________________

DIET CHIKMAGALUR

**6. ಭಾರತದ ಭೂಪಟದಲ್ಲಿ ಬಹಮನಿ ಸಾಮ್ರಾಜ್ಯದ ಭೂಪಟದಲ್ಲಿ ಗುರುತಿಸಿ, ರಾಜಧಾನಿಯನ್ನು ಗುರುತಿಸಿ.**



**ವಿಷಯ:-ಸಮಾಜ ವಿಜ್ಞಾನ** **ಘಟಕ:- ಭಕ್ತಿಪಂಥ ಹಾಗೂ ಸೂಫಿ ಪರಂಪರೆ** **ತರಗತಿ:- ಏಳನೇ ತರಗತಿ**

## ಅಭ್ಯಾಸ ಹಾಳೆ 1-ಕಲಿಕಾಂಶ ಚಟುವಟಿಕೆ

**ಸೂಚನೆಗಳು** :

- **ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.**
- **ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.**
- **ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.**


ಭಾರತ ಬಹು ಸಂಸ್ಕೃತಿಗಳ ಸಮಾಜವನ್ನು ಒಳಗೊಂಡಿರುವ ದೇಶ.ಈ ಸಮಾಜದಲ್ಲಿ ಜಾತಿ ವ್ಯವಸ್ಥೆ, ಮೌಢ್ಯ, ಕಂದಾಚಾರಗಳು ಮನೆ ಮಾಡಿದ್ದವು. ಅಂತಹ ಸಂದರ್ಭದಲ್ಲಿ ಉದಯಿಸಿದ ಕೆಲವು ಭಕ್ತಿ ಪಂಥ ಮತ್ತು ಸೂಫಿ ಪರಂಪರೆಯ ಸಂತರು ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗೆ ಮುಂದಾದರು. ಅವರು ವಿಶ್ವ ಸಹೋದರತೆಗೆ ಮಹತ್ವ ನೀಡಿ, ಮೋಕ್ಷ ಸಾಧನೆಗೆ ಭಕ್ತಿಯು ಉತ್ತಮ ಮಾರ್ಗವೆಂದು ಸಾರಿದರು. ಈ ಸಂಪ್ರದಾಯವನ್ನು ಭಕ್ತಿ ಪಂಥ ಎನ್ನುವರು.

**ಭಕ್ತಿ ಪಂಥದ ಸಾರ**

1) ಭಕ್ತಿ ಪಂಥವು ಮೇಲು ಕೀಳು ಭೇದ ಭಾವವನ್ನು ಖಂಡಿಸಿತು.
2) ಸಂತರು ಕಂದಾಚಾರವನ್ನು ವಿರೋಧಿಸಿ ಅದನ್ನು ಖಂಡಿಸಿದರು.
3) ಇವರು ಜನರ ಹೃದಯವನ್ನು ಬೆಸೆಯುವ ಕಾರ್ಯ ಮಾಡಿದರು.

**ದಕ್ಷಿಣ ಭಾರತದ ಸುಧಾರಕರು**

- ಆಂಡಾಳ್
- ಅಕ್ಕಮಹಾದೇವಿ
- ಪುರಂದರದಾಸರು
- ಕನಕದಾಸರು
- ಶಿಶುನಾಳ ಶರೀಫ




**ಆಂಡಾಳ್ :-** ತಮಿಳುನಾಡಿನ ವಿಷ್ಣುಭಕ್ತರಾದ 12 ಮಂದಿ ಆಳ್ವಾರಲ್ಲಿ 'ಆಂಡಾಳ್' ಕೂಡಾ ಒಬ್ಬರು. ಇವರು **'ತಿರುಪ್ಪಾವೈ'** ಎಂಬ ಗ್ರಂಥ ರಚಿಸಿ ದೇವರಿಗೆ ಸಮರ್ಪಿಸಿದರು. ಆಳ್ವಾರರ ಪ್ರಕಾರ ವಿಷ್ಣು ಭಕ್ತರಾದವರೆಲ್ಲರೂ ಸಮಾನರು, ಅವರ ಹುಟ್ಟನ್ನು ಯಾರೂ ಕೇಳಬಾರದು. ಜಾತಿ ಭಾವನೆ ಘೋರ ಪಾಪವೆಂದು ಇವರು ಭಾವಿಸಿದ್ದರು.



**ಅಕ್ಕಮಹಾದೇವಿ:-** 12ನೇ ಶತಮಾನದಲ್ಲಿ ವಚನ ಚಳವಳಿಯಲ್ಲಿ ಭಾಗವಹಿಸಿದ ದಿಟ್ಟ ಮಹಿಳೆ. ಕನ್ನಡ ವಚನ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾಗಿದೆ. **ಶಿವಮೊಗ್ಗ ಜಿಲ್ಲೆಯ ಉಡುತಡಿಯಲ್ಲಿ** ಅಕ್ಕಮಹಾದೇವಿ ಜನಿಸಿದರು. ಕಲ್ಯಾಣಕ್ಕೆ ತೆರಳಿ ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಕೆಲವು ಕಾಲ ತಂಗುತ್ತಾರೆ. ಅಲ್ಲಿ **'ಚನ್ನಮಲ್ಲಿಕಾರ್ಜುನ'** ಎಂಬ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸುತ್ತಾರೆ.



**ಪುರಂದರದಾಸರು:-** ಇವರು ಕನ್ನಡದಾಸ ಸಾಹಿತ್ಯದ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದಾರೆ. ಇವರನ್ನು **"ಕರ್ನಾಟಕ ಸಂಗೀತ ಪಿತಾಮಹ"** ಇವರು ಕೀರ್ತನೆಗಳನ್ನು ಹಾಡುತ್ತ ಅನೇಕ ಊರುಗಳನ್ನು ಸುತ್ತಿ ಕೃಷ್ಣದೇವರಾಯನ ಆಸ್ಥಾನವನ್ನು ಸೇರಿದರು. ಅಲ್ಲಿ ವ್ಯಾಸರಾಯರು ಇವರಿಗೆ ದೀಕ್ಷೆಯನ್ನು ಕೊಟ್ಟು **"ಪುರಂದರ"** ಎಂದು ನಾಮಕರಣ ಮಾಡಿದರು. **'ಪುರಂದರ ವಿಠ್ಠಲ'** ಎಂಬ ಅಂಕಿತದಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.



**ಕನಕದಾಸರು** ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯಚರಿತೆ ಎಂಬ ಷಟ್ಪದಿ ಕಾವ್ಯಗಳನ್ನು, ಮೋಹನ ತರಂಗಿಣಿ ಕೃತಿಯನ್ನು ರಚಿಸಿದ್ದಾರೆ. ಇವರು ಅನೇಕ ಕೀರ್ತನೆಗಳನ್ನೂ ರಚಿಸಿದ್ದಾರೆ. **'ಆದಿಕೇಶವ'** ಇವರ ಅಂಕಿತನಾಮವಾಗಿದೆ. ಕಾಗಿನೆಲೆಯ ಆದಿಕೇಶವ ಇವರ ಇಷ್ಟದೈವ. ಇವರು ತಮ್ಮ ಹಾಡುಗಳಲ್ಲಿ ಸಮಾಜದ ಮೂಢನಂಬಿಕೆಗಳನ್ನು ಖಂಡಿಸಿ ಭಗವಂತನನ್ನು ಸೇರುವ ಸರಳ ಮಾರ್ಗವನ್ನು ಬೋಧಿಸಿದ್ದಾರೆ. ಇವರು ತಮ್ಮ ಕೀರ್ತನೆಯಲ್ಲಿ ಜಾತಿ ಪದ್ಧತಿಯನ್ನು ವಿಡಂಬನೆ ಮಾಡಿದ್ದಾರೆ.



**ಶಿಶುನಾಳ ಶರೀಫರು:-** ಕನ್ನಡದ ಮೊದಲ ಮುಸ್ಲಿಂ ಅನುಭಾವಿ ಕವಿ. ಇವರನ್ನು **'ಕರ್ನಾಟಕದ ಕಬೀರ'** ಎಂದು ಕರೆಯುತ್ತಾರೆ. ಗುರುಗೋವಿಂದ ಭಟ್ಟರಿಂದ ದೀಕ್ಷೆ ತೆಗೆದುಕೊಂಡು ಅನೇಕ ತತ್ವಪದಗಳನ್ನು ರಚಿಸಿದರು. ಶಿಶುನಾಳದಲ್ಲಿ ಇವರ ಸಮಾದಿ ಇದೆ. ಹಿಂದೂ-ಮುಸ್ಲಿಮರಿಬ್ಬರೂ ಇವರನ್ನು ಆರಾಧಿಸುತ್ತಾರೆ. ಜಾತಿ ಮತ್ತು ಧರ್ಮಗಳ ಗಡಿಮೀರಿ ಇವರು ಮಾನವೀಯ ಮೌಲ್ಯಗಳನ್ನು ಬಿತ್ತಿದರು.


**ವಿಷಯ:– ಸಮಾಜ ವಿಜ್ಞಾನ** **ಘಟಕ:– ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ** **ತರಗತಿ:– ಏಳನೇ ತರಗತಿ**

## ಅಭ್ಯಾಸ ಹಾಳೆ -2 ಅಭ್ಯಾಸ ಚಟುವಟಿಕೆ

**ಸೂಚನೆಗಳು :–**

- ❖ ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ❖ ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

**1. ಕೆಳಗೆ ನೀಡಿರುವ ಸುಧಾರಕರ ಚಿತ್ರಗಳನ್ನು ಗಮನಿಸಿ ಅವರ ಹೆಸರುಗಳನ್ನು ಬರೆಯಿರಿ**







______________ ______________ ______________ ______________ ______________

**2. ನಾನು ಯಾರು ತಿಳಿಸಿ.**

1. 'ಪುರಂದರ ವಿಠ್ಠಲ' ಎಂಬ ಅಂಕಿತದಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದೇನೆ. --------------------
2. "ಚನ್ನಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸಿದ್ದೇನೆ. ------------------------
3. ಆದಿಕೇಶವ' ಎಂಬ ಅಂಕಿತನಾಮದೊಂದಿಗೆ ಕೀರ್ತನೆ ರಚಿಸಿದ್ದೇನೆ. ----------------------
4. ಗುರು ಗೋವಿಂದ ಭಟ್ಟರಿಂದ ದೀಕ್ಷೆ ತೆಗೆದುಕೊಂಡು ಅನೇಕ ತತ್ವಪದಗಳನ್ನು ರಚಿಸಿದ್ದೇನೆ. ---------------
5. ತಮಿಳುನಾಡಿನ ವಿಷ್ಣುಭಕ್ತರಾದ 12 ಮಂದಿ ಆಳ್ವಾರಲ್ಲಿ ನಾನೂ ಕೂಡಾ ಒಬ್ಬ. ------------------------

**3. ಈ ಕೆಳಗಿನ ಸಾಹಿತ್ಯ ಬರೆದ ಸುಧಾರಕರನ್ನು ಹೆಸರನ್ನು ತಿಳಿಸಿ.**

- ➢ ರಾಮ ಧಾನ್ಯ ಚರಿತೆ –______________________
- ➢ ತಿರುಪ್ಪಾವೈ –______________________
- ➢ ತತ್ವಪದಗಳು –______________________
- ➢ ವಚನಗಳು –______________________

**4. ಭಕ್ತಿ ಪಂಥದ ಪ್ರಮುಖ ಸಾರವನ್ನು ಬರೆಯಿರಿ**

______________________________________________________________________________
______________________________________________________________________________
______________________________________________________________________________

**5. ಕನ್ನಡದಲ್ಲಿ ವಚನ ಸಾಹಿತ್ಯವನ್ನು ರಚಿಸಿದ ಯಾವುದಾದರು ಐದು ವಚನಕಾರರ ಹೆಸರನ್ನು ಬರೆಯಿರಿ.**

1.____________ 2.____________ 3.____________ 4.____________ 5.____________

**6. ಅಕ್ಕಮಹಾದೇವಿಯು ರಚಿಸಿರುವ ಯಾವುದಾದರೊಂದು ವಚನವನ್ನು ಸಂಗ್ರಹಿಸಿ ಬರೆ.**

________________________________________________________
________________________________________________________
________________________________________________________
________________________________________________________

**7. ಮೂಢನಂಬಿಕೆ ಹಾಗೂ ಜಾತಿ ಪದ್ದತಿ ವಿರುದ್ಧ ಹೋರಾಡಿದ ಇತರೆ ಸಮಾಜ ಸುಧಾರಕರ ಹೆಸರು ಬರೆಯಿರಿ.**

1.______________ 2.______________ 3.______________ 4.______________

DIET CHIKMAGALORE

**ವಿಷಯ:– ಸಮಾಜ ವಿಜ್ಞಾನ** **ಘಟಕ:– ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ** **ತರಗತಿ:– ಏಳನೇ ತರಗತಿ**

## ಅಭ್ಯಾಸ ಹಾಳೆ–3 ಮೌಲ್ಯಮಾಪನ ಚಟುವಟಿಕೆ

**ಸೂಚನೆಗಳು :–**

- ❖ ಕಲಿತಿರುವ ಕಲಿಕಾಂಶದ ಸಹಾಯದಿಂದ ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸುವುದು.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ❖ ಅಗತ್ಯವೆನಿಸಿದಾಗ ಹಿರಿಯರ ಸಹಾಯ ಪಡೆಯುವದು.

**1. ದಕ್ಷಿಣ ಭಾರತದ ಭಕ್ತಿ ಪಂಥದ ಸುಧಾರಕರು ಯಾರು ?**

1.____________________ 2.____________________

3.____________________ 4.____________________

5.____________________

**2. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಕರ್ನಾಟಕದ ಕಭೀರ | ಅಕ್ಕಮಹಾದೇವಿ |
| 2. ಕರ್ನಾಟಕ ಸಂಗೀತ ಪಿತಾಮಹ | ಶಿಶುನಾಳ ಶರೀಫ |
| 3. ವಚನಗಾರ್ತಿ | ಪುರಂದರದಾಸರು |
| 4. ಕಾಗಿನೆಲೆ ಆದಿಕೇಶವ | ವಿಷ್ಣುವಿನ ಭಕ್ತೆ |
| 5. ಆಂಡಾಳ್ | ಕನಕದಾಸರು |

**3. ಕನಕನ ಕಿಂಡಿ ಎಲ್ಲಿದೆ ? ಅದರ ವೈಶಿಷ್ಟತೆ ಏನು?**

________________________________________

________________________________________

________________________________________

**4. ಕನಕದಾಸರು ರಚಿಸಿರುವ ಕೃತಿಗಳನ್ನು ಹೆಸರಿಸಿ**

**5. ಜಾತಿ ಪದ್ದತಿಯಿಂದಾಗುವ ತೊಂದರೆಗಳೇನು ? ನಿಮಗಾದ ಅನುಭವ ಕುರಿತು ಬರೆಯಿರಿ.**

________________________________________

________________________________________

**6. ಬಿಟ್ಟ ಸ್ಥಳ ಭರ್ತಿ ಮಾಡಿ.**

1. ಕನ್ನಡದ ಮೊದಲ ಮುಸ್ಲಿಂ ಅನುಭಾವಿ ಕವಿ ____________________
2. "ಕರ್ನಾಟಕ ಸಂಗೀತ ಪಿತಾಮಹ" ಎಂದು ಪ್ರಸಿದ್ಧವಾದವರು ____________________
3. ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿದವರು ____________________.
4. ಮೋಹನ ತರಂಗಿಣಿ ಕೃತಿಯನ್ನು ರಚಿಸಿದವರು ____________________
5. ಕನ್ನಡದ ಮೊದಲ ವಚನಗಾರ್ತಿ ____________________

**7. "ಭಾರತ ಬಹು ಸಂಸ್ಕೃತಿಗಳ ಸಮಾಜವನ್ನು ಒಳಗೊಂಡಿರುವ ದೇಶ. ಈ ಹೇಳಿಕೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.**

________________________________________

________________________________________


DIET CHIKMAGALORE

## ಅಭ್ಯಾಸ ಹಾಳೆ– 1 –ಕಲಿಕಾಂಶ ಚಟುವಟಿಕೆ

**ಸೂಚನೆಗಳು:–**


- ❖ ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದವುದು.
- ❖ ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

### ಉತ್ತರ ಭಾರತದ ಭಕ್ತಿ ಪರಂಪರೆ




**ಕಬೀರ್‌ದಾಸರು**

ಭಕ್ತಿಪಂಥದ ಪ್ರಸಿದ್ಧ ಸಂತರಾದ ಕಬೀರ್‌ದಾಸ ರಾಮಾನಂದರ ಶಿಷ್ಯರು. ಜಾತಿ ಪದ್ಧತಿ, ಆಡಂಬರದ ಜೀವನ, ಜಾತಿ ಶ್ರೇಷ್ಠತೆ, ಧಾರ್ಮಿಕ ಅಸಮಾನತೆ ಇವುಗಳನ್ನು ಖಂಡಿಸಿದರು. ಕಬೀರರು ತಾನು ರಾಮ ಮತ್ತು ಅಲ್ಲಾಹನ ಮಗನೆಂದು ಸಾರಿದರು.ತಮ್ಮ ತತ್ವಗಳನ್ನು ಜನರಿಗೆ, ಅರ್ಥವಾಗುವಂತೆ 'ದೋಹ' (ಎರಡು ಸಾಲಿನ ಪದ್ಯ)ಗಳೆಂಬ ಸಣ್ಣ ಕಾವ್ಯಗಳಲ್ಲಿ ಬೋಧಿಸಿದರು. ಇವರ ಅನುಯಾಯಿಗಳನ್ನು ಕಬೀರ್ ಪಂಥಿಗಳೆಂದು ಕರೆಯುವರು.




**ಗುರುನಾನಕರು**

ಗುರುನಾನಕರು ಸಿಖ್ ಧರ್ಮದ ಸಂಸ್ಥಾಪಕರು. "ಗ್ರಂಥ ಸಾಹೇಬ್" ಎಂಬುದು ಸಿಖ್ಖರ ಪವಿತ್ರ ಗ್ರಂಥ ಇವರು ಈಗಿನ ಪಾಕಿಸ್ತಾನದಲ್ಲಿರುವ ಪಂಜಾಬಿನ ತಲವಾಂಡಿ ಗ್ರಾಮದಲ್ಲಿ 1469ರಲ್ಲಿ ಜನಿಸಿದರು. ವಿಶ್ವಕ್ಕೆ ದೇವರು ಒಬ್ಬನೆ, ಅವನು ಸತ್ಯ ನಿತ್ಯನೆಂದು ಸಾರಿದರು. ಸಾಮಾಜಿಕ ಅನಿಷ್ಟಗಳಾದ ಮೂರ್ತಿಪೂಜೆ, ಜಾತಿಪದ್ಧತಿ, ಸತಿಪದ್ಧತಿ ವಿರೋಧಿಸಿದರು. ನಾನಕರು ಕರ್ನಾಟಕದ ಬೀದರಿನಲ್ಲಿ ತಂಗಿದ್ದ ಸ್ಥಳವನ್ನು "ನಾನಕ್‌ಝರಾ" ಎಂದು ಕರೆಯುತ್ತಾರೆ.




**ತುಳಸೀದಾಸರು**

ಉತ್ತರ ಭಾರತದ ಭಕ್ತಿ ಮಾರ್ಗದ ಪ್ರತಿಪಾದಕರಲ್ಲಿ ತುಳಸೀದಾಸರು ಅಗ್ರಗಣ್ಯರಾಗಿದ್ದಾರೆ. ಇವರು "ರಾಮಚರಿತ ಮಾನಸ" ಎಂಬ ಗ್ರಂಥವನ್ನು ಬರೆದರು. ಇದು ಹಿಂದೀ ಸಾಹಿತ್ಯದ ಶ್ರೇಷ್ಠ ಕೃತಿಯಾಗಿದೆ. ಉತ್ತರದಲ್ಲಿ ಇದು **'ತುಳಸೀ ರಾಮಾಯಣ'** ಎಂದು ಜನಪ್ರಿಯವಾಗಿದೆ. ರಾಮಭಕ್ತರಾದ ಇವರು ದೈವಭಕ್ತಿ, ಪರಿಶುದ್ಧ ಜೀವನ, ಪ್ರೀತಿ, ಪ್ರೇಮ, ಸಹನೆ, ಔದಾರ್ಯಗಳನ್ನು ಜನಮನದಲ್ಲಿ ಬಿತ್ತಿದರು.



**ಮೀರಾಬಾಯಿ**

"ಕಲಿಯುಗದರಾಧ" ಎಂದು ಕರೆಯಲಾಗುವ ಸಂತ **ಮೀರಾಬಾಯಿ** ಭಾರತದ ಮಹಾನ್ ಕೀರ್ತನ ಗಾರ್ತಿ ಮೀರಾಬಾಯಿ ಅರಮನೆ ಬಿಟ್ಟು ಶ್ರೀ ಕೃಷ್ಣನ ಕ್ಷೇತ್ರವಾದ ಬೃಂದಾವನಕ್ಕೆ ಹೋದರು. ಅವರು ರಚಿಸಿದ ಕೀರ್ತನೆಗಳಲ್ಲಿ ಭಕ್ತಿ, ಪ್ರೇಮ ತುಂಬಿ ತುಳುಕಿದೆ. **ಗಿರಿಧರ ಗೋಪಾಲ** ಇವರ ಆರಾಧ್ಯ ದೈವ. ತನ್ನ ನೂರಾರು ಭಜನೆಗಳಿಂದ ಮೀರಾಬಾಯಿ ಅವರು ಇಂದಿಗೂ ಜನಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.



**ಚೈತನ್ಯ**


**ಚೈತನ್ಯರು** ಪಶ್ಚಿಮ ಬಂಗಾಳದ ನವದ್ವೀಪ (ನಾಡಿಯಾ) ದಲ್ಲಿ ಸಾ.ಶ. 1485ರಲ್ಲಿ ಜನಿಸಿದರು. **ವಿಶ್ವಂಭರ** ಎಂಬುದು ಚೈತನ್ಯರ ಮೊದಲ ಹೆಸರು. ಈಶ್ವರಿಪುರಿ ಇವರ ಗುರುಗಳಾಗಿದ್ದರು. ವಿಶ್ವ ಪ್ರೇಮವೇ ದೇವರ ಪ್ರೀತಿಗಳಿಸುವ ಪ್ರಥಮ ಹೆಜ್ಜೆ ಎಂದು ಬೋಧಿಸಿದರು. ಇವರನ್ನು ಶ್ರೀಕೃಷ್ಣನ ಅವತಾರವೆಂದು ಅವರನ್ನು **"ಚೈತನ್ಯ ಮಹಾಪ್ರಭು"** ಎಂದು ಕರೆದಿದ್ದಾರೆ.

## ಅಭ್ಯಾಸ ಹಾಳೆ-2-ಅಭ್ಯಾಸ ಚಟುವಟಿಕೆ

**ಸೂಚನೆಗಳು :**

- ❖ ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ❖ ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

**1. ಈ ಕೆಳಗಿನ ಭಕ್ತಿ ಪಂಥದ ಸುಧಾರಕರನ್ನು ಗುರುತಿಸಿ ನೀಡಿರುವ ಖಾಲಿ ಸ್ಥಳದಲ್ಲಿ ಅವರ ಹೆಸರನ್ನು ಬರೆಯಿರಿ**

| | | | | |
|---|---|---|---|---|
|  |  |  |  |  |
| | | | | |

**2. ಮೊದಲೆರೆಡು ಪದಗಳ ಸಂಭಂದವನ್ನು ಗಮನಿಸಿ ಮೂರನೇ ಪದಕ್ಕೆ ಸಂಬಂಧಿಸಿದ ಪದವನ್ನು ಖಾಲಿ ಸ್ಥಳದಲ್ಲಿ ಬರೆಯಿರಿ.**

1. ಕಭೀರರು : ದೋಹ :: ತುಳಸೀದಾಸರ ಗ್ರಂಥ : ________________
2. ಚೈತನ್ಯ : ಚೈತನ್ಯ ಮಹಾಪ್ರಭು :: ಮೀರಾಭಾಯಿ :________________
3. ಸಲೀಮ್ ಚಿಸ್ತಿಯಾ ಗೋರಿ : ಆಗ್ರಾ :: ನಾನಕ್ ಝರಾ :________________

**3. ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ**

| ಎ | ಬಿ |
|---|---|
| 1. ಗುರುನಾನಕ್ | ಸೂಫಿಸಂತ |
| 2. ಚೈತನ್ಯ | ಸಿಖ್‌ಧರ್ಮ |
| 3. ನಿಜಾಮುದ್ದಿನ್ ಔಲಿಯ | ಕಲಿಯುಗದ ರಾಧ |
| 4. ಮೀರಾಬಾಯಿ | ಹರೇಕೃಷ್ಣ ಪಂಥ |

**4. ಕೆಳಗೆ ನೀಡಿರುವ ಸ್ಥಳಗಳು ಯಾವ ರಾಜ್ಯದಲ್ಲಿವೆ?**

1. ಸಲೀಮ್ ಚಿಸ್ತಿಯಾ ಗೋರಿ – ________________
2. ಬೃಂದಾವನ – ________________
3. ನವದ್ವೀಪ – ________________
4. ಕಲಬುರಗಿ – ________________

**5. ಹಿಂದು ಹಾಗೂ ಮುಸ್ಲಿಂರಲ್ಲಿ ಧರ್ಮ ಜಾಗೃತಿ ಮಾಡಿದ ಸೂಫಿ ಸಂತರ ಹೆಸರನ್ನು ಪಟ್ಟಿಮಾಡಿ.**

1.________________ 2.________________

3.________________ 4.________________

DIET CHIKMAGALUR

**ವಿಷಯ:– ಸಮಾಜ ವಿಜ್ಞಾನ ಘಟಕ:– ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ–2 ತರಗತಿ:– ಏಳನೇ ತರಗತಿ**

**ಅಭ್ಯಾಸ ಹಾಳೆ–3– ಮೌಲ್ಯಮಾಪನ ಚಟುವಟಿಕೆ**

**ಸೂಚನೆಗಳು :**

- ❖ ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು .
- ❖ ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

**1. ಉತ್ತರ ಭಾರತದ ಭಕ್ತಿ ಪಂಥದ ಸಂತರ ಹೆಸರನ್ನು ಬರೆಯಿರಿ.**

1.____________________ 2.____________________ 3.____________________

4.____________________ 5.____________________

**2. ಯೋಚಿಸಿ ಬರೆಯ ಬಲ್ಲಿರಾ.**

1. ರಮಾನಂದರ ಶಿಷ್ಯರು ಯಾರು? :– ______________
2. ಕರ್ನಾಟಕದ ಯಾವ ಊರಿಗೆ ಗುರನಾನಕ್ ರವರು ಆಗಮಿಸಿದ್ದರು? :– ______________
3. ಮೀರಾಭಾಯಿಯವರ ಆರಾಧ್ಯ ದೈವ ಯಾವುದು ? :– ______________
4. ಸಿಖ್ಖರ ಪವಿತ್ರ ಗ್ರಂಥ ಯಾವುದು? :– ______________
5. ಚಿಸ್ತಿ ಪಂಗಡದ ಸ್ಥಾಪಕ ಯಾರು? :– ______________

**3. ಸೂಫಿ ಪಂಥದ ಸಾರವನ್ನು ಪಟ್ಟಿ ಮಾಡಿ.**

________________________________________________________________________

________________________________________________________________________

________________________________________________________________________

________________________________________________________________________

**4. ಭಕ್ತಿಪಂಥದ ಪರಿಣಾಮಗಳನ್ನು ಪಟ್ಟಿ ಮಾಡಿ.**

________________________________________________________________________

________________________________________________________________________

________________________________________________________________________

________________________________________________________________________

**6. ದಕ್ಷಿಣ ಭಾರತದ ಹಾಗೂ ಉತ್ತರ ಭಾರತದ ಭಕ್ತಿ ಪಂಥದ ಸಂತರಲ್ಲಿಯ ಸಾಮ್ಯತೆ ಏನು? ವಿವರಿಸಿ**

________________________________________________________________________

________________________________________________________________________

________________________________________________________________________

________________________________________________________________________

**6. ಕೆಳಗಿನವುಗಳಿಗೆ ಸಂಕ್ಷಿಪ್ತವಾಗಿ ಟಿಪ್ಪಣಿ ಬರೆಯಿರಿ**

| | |
|---|---|
| **1. ಮೀರಾಬಾಯಿ** | **2. ಗುರುನಾನಕ್** |
| **3. ಸೂಫಿ ಸಂತರು** | **4. ಜಾತಿಪದ್ಧತಿ** |

DIET CHIKMAGALORE

ವಿಷಯ:- ಸಮಾಜ ವಿಜ್ಞಾನ ಘಟಕ :- ನಮ್ಮ ಸಂವಿಧಾನ ತರಗತಿ:- ಏಳನೇ ತರಗತಿ

## ಅಭ್ಯಾಸ ಹಾಳೆ-1 ಕಲಿಕಾಂಶ ಚಟುವಟಿಕೆ

**ಸೂಚನೆಗಳು :-**

- ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.


### ಸಂವಿಧಾನದಅರ್ಥ

- ಸಂವಿಧಾನ ದೇಶದ ಮೂಲಭೂತ ಕಾನೂನು.
- ಸರ್ಕಾರದ ಅಂಗಗಳು, ಅವುಗಳ ಅಧಿಕಾರ ಹಾಗೂ ಕಾರ್ಯಗಳನ್ನು ನಿರೂಪಿಸುತ್ತದೆ.
- ಹಕ್ಕುಗಳು ಮತ್ತು ಕರ್ತವ್ಯಗಳನ್ನು ಹೊಂದಿದೆ.
- ಇದು ಸರಕಾರಕ್ಕೆ ಮಾರ್ಗಸೂಚಿಯಾಗಿರುತ್ತದೆ.

ಇದನ್ನು ಯಾರೂ ಉಲ್ಲಂಘಿಸುವಂತಿಲ್ಲ.

### ಸಂವಿಧಾನದ ಮಹತ್ವ

- ಕಾನೂನಿನ ಎದುರು ಎಲ್ಲರೂ ಸಮಾನರೆಂದು ಎಲ್ಲಾ ಪ್ರಜೆಗಳ ಹಕ್ಕುಗಳನ್ನು ರಕ್ಷಿಸುತ್ತದೆ.
- ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಕಾರ್ಯಗಳನ್ನು ನಿರ್ದೇಶಿಸಿ ಇವುಗಳ ನಡುವೆ ಸಮನ್ವಯ ಸಾಧಿಸಲು ನೆರವಾಗುತ್ತದೆ.

| | | | |
|---|---|---|---|
|  | ಭಾರತದ ಸಂವಿಧಾನವನ್ನು **'ಸಂವಿಧಾನ ರಚನಾ ಸಭೆ'** ಎಂಬ ವಿಶೇಷ ಸಭೆಯು ಸಿದ್ಧಪಡಿಸಿತು. ಪ್ರಥಮ ಅಧಿವೇಶನದಲ್ಲಿ **ಡಾ.ರಾಜೇಂದ್ರ ಪ್ರಸಾದ್** ರವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. |  | ಸಂವಿಧಾನದ ಕರಡು ಪ್ರತಿಯನ್ನು ಸಿದ್ಧಪಡಿಸಲು 'ಸಂವಿಧಾನ ಕರಡು ಸಮಿತಿ'ಯನ್ನು ನೇಮಿಸಿತು. ಈ **ಕರಡು ಸಮಿತಿಯ ಅಧ್ಯಕ್ಷರು ಡಾ.ಬಿ.ಆರ್.ಅಂಬೇಡ್ಕರ್.** |

ಭಾರತದ ಸಂವಿಧಾನವನ್ನು ಜನವರಿ 26, 1950ರಂದು ಜಾರಿಗೊಳಿಸಲಾಯಿತು. ಪ್ರತಿ ವರ್ಷವೂ ಜನವರಿ26 ರಂದು ಗಣರಾಜ್ಯೋತ್ಸವವನ್ನು ಆಚರಿಸುತ್ತೇವೆ.

**ಭಾರತದ ಸಂವಿಧಾನದ ನಿರ್ದೇಶನದಂತೆ ಸಂಸತ್ತು 1952ರಲ್ಲಿ ರಚನೆಯಾಯಿತು .ಇದು ಎರಡು ಸದನ ಹೊಂದಿದೆ.**

**ಸಂಸತ್ತು (ಪಾರ್ಲಿಮೆಂಟ್)**

**1. ರಾಜ್ಯಸಭೆ 2. ಲೋಕಸಭೆ**

**ನಮ್ಮ ಸಂವಿಧಾನದ ಗಾತ್ರ:** ಭಾರತ ಸಂವಿಧಾನವು 395 ವಿಧಿಗಳನ್ನು ಹಾಗೂ 12 ಪರಿಚ್ಛೇದಗಳನ್ನು ಒಳಗೊಂಡಿದೆ.

### ನಮ್ಮ ಸಂವಿಧಾನದ ಮುಖ್ಯ ಲಕ್ಷಣಗಳು

1. ಲಿಖಿತ ಸಂವಿಧಾನ
2. ಗಣರಾಜ್ಯ
3. ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು
4. ಜಾತ್ಯಾತೀತ (ಸೆಕ್ಯುಲರಿಸಂ)
5. ಸ್ವತಂತ್ರ ನ್ಯಾಯಾಂಗ
6. ವಯಸ್ಕ ಮತದಾನ ಪದ್ಧತಿ
7. ಚುನಾವಣಾ ಪದ್ಧತಿ

## ನಮ್ಮ ಸಂವಿಧಾನದ ಪ್ರಸ್ತಾವನೆ

**"ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ, ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ಪೌರರಿಗೆ: ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ ಮತ್ತು ಆರಾಧನಾ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಅವಕಾಶ ಸಮಾನತೆ; ಹಾಗೂ ಇವುಗಳು ದೊರೆಯುವಂತೆ ಮಾಡಲು; ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಭ್ರಾತೃತ್ವ ಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾ ಪೂರ್ವಕ ಸಂಕಲ್ಪ ಮಾಡಿ; ನಮ್ಮ ಸಂವಿಧಾನ ಸಭೆಯಲ್ಲಿ 1949ರ ನವೆಂಬರ್ ಇಪ್ಪತ್ತಾರರ ಈ ದಿವಸದಂದು ದೃಢಸಂಕಲ್ಪ ಮಾಡಿ, ಈ ಸಂವಿಧಾನವನ್ನು ಅಂಗೀಕರಿಸಿ, ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ."**


ವಿಷಯ:– ಸಮಾಜ ವಿಜ್ಞಾನ ಘಟಕ:– ನಮ್ಮ ಸಂವಿಧಾನ ತರಗತಿ:– ಏಳನೇ ತರಗತಿ

## ಅಭ್ಯಾಸ ಹಾಳೆ – 2 – ಅಭ್ಯಾಸ ಚಟುವಟಿಕೆ

**ಸೂಚನೆಗಳು :–**

- ❖ ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ❖ ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

1. ಭಾರತದ ಸಂವಿಧಾನದ ಲಕ್ಷಣಗಳನ್ನು ಖಾಲಿ ಇರುವ ಚೌಕದಲ್ಲಿ ಬರೆಯಿರಿ.




2. ಕೆಳಗಿನ ರಾಷ್ಟ್ರ ನಾಯಕರ ಚಿತ್ರವನ್ನು ಗುರುತಿಸಿ ಹೆಸರನ್ನು ಬರೆಯಿರಿ.



3. ಸರ್ಕಾರದ ಮೂರು ಅಂಗಗಳ ಹೆಸರನ್ನು ಪಟ್ಟಿಮಾಡಿ

______________________________

______________________________

______________________________

4. ಭಾರತ ಸಂವಿಧಾನದ ಪ್ರಸ್ತಾವನೆಯನ್ನು ಬರೆಯಿರಿ

5. ಇವುಗಳ ಅರ್ಥ ತಿಳಿಸಿ.

1. ಸಂವಿಧಾನ :–______________________________

2. ಸಂವಿಧಾನ ರಚನಾ ಸಭೆ :–______________________________

3. ಸಂವಿಧಾನ ಕರಡು ಸಮಿತಿ :–______________________________

**ವಿಷಯ:– ಸಮಾಜ ವಿಜ್ಞಾನ** **ಘಟಕ:– ನಮ್ಮ ಸಂವಿಧಾನ** **ತರಗತಿ:– ಏಳನೇ ತರಗತಿ**

## ಅಭ್ಯಾಸ ಹಾಳೆ –3–ಮೌಲ್ಯಮಾಪನ ಚಟುವಟಿಕೆ

**ಸೂಚನೆಗಳು:–**

- ❖ ಕಲಿಕಾಂಶವನ್ನು ಅರ್ಥೈಸಿಕೊಂಡು ನೀಡಿರುವ ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ❖ ಹೆಚ್ಚಿನ ಮಾಹಿತಿಗಾಗಿ ಪಠ್ಯಪುಸ್ತಕವನ್ನು ಓದುವುದು.
- ❖ ಅಗತ್ಯವೆನಿಸಿದರೆ ಹಿರಿಯರ ಸಹಾಯ ಪಡೆಯುವುದು.

**1. ಹೊಂದಿಸಿ ಬರೆಯಿರಿ**

1. ಸಂವಿಧಾನ ಶಿಲ್ಪಿ – ಎರಡು ಸದನಗಳು
2. ಮೊದಲ ರಾಷ್ಟ್ರಪತಿ – ಬಿ.ಆರ್. ಅಂಬೇಡ್ಕರ್
3. ಸಂಸತ್ತು – ಬಾಬು ರಾಜೇಂದ್ರ ಪ್ರಸಾದ್
4. ಸಂವಿಧಾನ – 18 ವರ್ಷ
5. ಮತದಾನದ ವಯಸ್ಸು – ಮೂಲಭೂತ ಕಾನೂನು

**2. ಬಿಟ್ಟ ಸ್ಥಳ ಭರ್ತಿ ಮಾಡಿ**

1. ಭಾರತದ ಸಂವಿಧಾನವನ್ನು ______________ ರಂದು ಜಾರಿಗೊಳಿಸಲಾಯಿತು.
2. 'ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು ________________
3. ಸಂವಿಧಾನವು__________ ಮತ್ತು ವ್ಯಕ್ತಿಗಳ ನಡುವೆ ಉತ್ತಮ ಸಂಬಂಧಗಳನ್ನು ಏರ್ಪಡಿಸುತ್ತದೆ.
4. ಭಾರತ ಸಂವಿಧಾನವು ________ ವಿಧಿಗಳನ್ನು ಒಳಗೊಂಡಿದೆ.
5. ಭಾರತ ಸಂವಿಧಾನವು __________ ಮೂಲಭೂತ ಹಕ್ಕುಗಳನ್ನು ನೀಡಿದೆ.

**3. ನೀಡಲಾದ ಅಕ್ಷರಗಳಿಂದ ಸೂಕ್ತ ಪದ ರಚಿಸಿ.**

1. ವಿ ಂ ಸ ನ ಧಾ –________________
2. ಶಿ ಸ ಲ್ಪಿ ಂ ಧಾ ವಿ ನ –________________
3. ಕ ಸ ಲೋ ಭೆ –________________
4. ರಾ ತ್ರ ಗ ಜ್ಯೋ ಣ ವ –________________
5. ಪ್ರ ರಾ ದ್ರ ಜೇ ಸಾ ಂ ದ –________________

**4. ಸಂವಿಧಾನದ ಅರ್ಥ ತಿಳಿಸಿ**

________________________________________________

________________________________________________

**5. ವಯಸ್ಕ ಮತದಾನ ಪದ್ದತಿ ಎಂದರೇನು?**

________________________________________________

________________________________________________

**6. ಜಾತ್ಯಾತೀತ ಎಂದರೇನು?**

________________________________________________

________________________________________________

**7. ಭಾರತ ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್‌ರವರ ಪಾತ್ರವೇನು? ವಿಶ್ಲೇಷಿಸಿ.**

________________________________________________

________________________________________________

DIET CHIKMAGALORE